ತನ್ಮಯನಾಗಿರೋ ಮಾದನನ್ನು ಕಾಣುವ ಹುಡುಗಿಯರಿಗೋ ಬೆರಗು. ದಿನಗಳೆದಂತೆ ಮಾದ ಕೆತ್ತಿಟ್ಟ ವಿಗ್ರಹಗಳಷ್ಟೆ ಅಲ್ಲ ಉಮೆಗೆ ಅವನೂ ಇಷ್ಟವಾದ. ತಾವೆಲ್ಲಾ ಏಟೇ ಗೌಜು ಮಾಡಿದರೂ, ಅದು ತನ್ನಂತಹ ಚೆಲುವೆ ನಿಂತಾಗಲೂ ಮಾದ ತಲೆ ಎತ್ತಿ ನೋಡದ್ದು ಅವಳ ಅಹಂ ಕೆಣಕಿತು. ಒಂದಿನ ತಾನೇ ಮಾತಾಡಿಸಿ ಬಿಟ್ಟಳು. 'ಏನಪ್ಪಾ? ಕಲ್ಲು ಚೂರುಗಳು ಕಣ್ಣಿಗೆ ಸಿಡಿದ್ರೆ ಏನ್ ಮಾಡ್ತಿಯಾ?' ಅವನೋ ಕಾರ್ಯನಿರತ. 'ಕೇಳಿದ್ದು ನಿಂಗೇನಯ್ಯೋ?' ಗಟ್ಟಿಸಿ ಕೇಳಿದಳು. 'ಏನಂದ್ರಿ?' ಕೆಲಸ ನಿಲ್ಲಿಸಿ ಅವರತ್ತ ನೋಡದೆ ಕೇಳಿದ. 'ನಾನು ಮೂಕ ಅನ್ಕಂಡಿದ್ದೆ! ಮಾತಾಡ್ತಾನ್ ಕಣ್ರೆ' ಉಮೆ ನಕ್ಕಾಗ ಗೆಳತಿಯರು ಗೊಳ್ ಅಂದರು. 'ನಿನ್ನ ಕಣ್ಣಿಗೆ ಕಲ್ಲು ಚೂರುಗಳು ಸಿಡಿಯಲ್ವಾ ಅಂತ ಕೇಳದ್ನಪ್ಪ' ಕತ್ತು ಕೊಂಕಿಸಿದಳು ಉಮೆ. 'ಅದೆಲ್ಲಾ ನನ್ಗೆ ಗೊತ್ತಾಗಕಿಲ್ಲ...' ಬೆಪ್ಪಾಗಿ ಅವಳನ್ನೇ ನೋಡುತ್ತಾ ಮುಗ್ಧ ನಗೆ ಬೀರಿ ಅವಳನ್ನು ಮತ್ತಷ್ಟು ಮರುಳು ಮಾಡಿದ. 'ನಿಮ್ಮಂತಹ ಶಿಲ್ಪಿಗಳಿಗೆ ಕಣ್ಣು ಕೈಗಳು ಭಾಳ ಮುಖ್ಯ... ಹುಷಾರಾಗಿ ಕೆತ್ನೆ ಮಾಡು' ಅಂದೋಳೆ ಗೆಳತಿಯರೊಂದಿಗೆ ಹೊಂಟೇ

